# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,

# ಬೆಂಗಳೂರು ನಗರ.

## ಸಿಸಿ.35476/2011

**ಚಾಸಾ-6, ಪ್ರಾಸಾ-2**

| | |
|---|---|
| **ಸಾಕ್ಷಿದಾರರ ಹೆಸರು** | **ಶ್ರೀ. ಮಂಜು ಜೆ.** |
| **ತಂದೆಯ ಹೆಸರು** | **ಶ್ರೀ ಜವರೇಗೌಡ** |
| **ವಯಸ್ಸು** | **43 ವರ್ಷ** |
| **ಉದ್ಯೋಗ** | **ಪಿ.ಐ., ಸಿ.ಸಿ.ಬಿ., ಬೆಂಗಳೂರು.** |
| **ವಾಸ** | **ಬನಶಂಕರಿ, ಬೆಂಗಳೂರು** |
| **ಪ್ರಮಾಣೀಕರಿಸಿದ ದಿನಾಂಕ** | **31/05/2022** |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ**

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

1. ನಾನು ದಿನಾಂಕ 01/02/2010 ರಿಂದ 11/11/2011 ರವರೆಗೆ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕ 11/06/2011 ರಂದು ನಾನು ರೌಂಡ್ಸನಲ್ಲಿದ್ದಾಗ ಮಾಹಿತಿ ಬಂತು, ನಾನು ಸ್ಥಳಕ್ಕೆ ಹೋದಾಗ ಈ ಕೇಸಿನ ಪಿರ್ಯಾದಿಯು ದೂರು ಕೊಟ್ಟರು, ಅದನ್ನು ಪಡೆದು ಠಾಣೆಗೆ ಬಂದು, ಅದನ್ನು ಠಾಣಾ ಮೊ.ಸಂ. 161/2011 ರಂತೆ ನಮೂದಿಸಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ತೋರಿಸಿದ ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಅವರ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ದೂರಿನ ಮೇರೆಗೆ ಪ್ರ.ವ ವರದಿಯನ್ನು ತಯಾರಿಸಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ತೋರಿಸಿದ ಪ್ರ.ವ ವರದಿಯನ್ನು ನಿಪಿ-3 ಎಂದು, ಅವರ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

2. ನಂತರ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ಪಿರ್ಯಾದಿ ತೋರಿಸಿದ ಜಾಗದಲ್ಲಿ ಜಯಲಕ್ಷ್ಮಿ ಮತ್ತು ಮುರುಳಿಕೃಷ್ಣ ಅವರ ಸಮಕ್ಷಮ ಸ್ಥಳ ಪಂಚನಾಮೆಯನ್ನು

ಮಾಡಿ ನಕಾಶೆ ತಯಾರಿಸಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳಲ್ಲಿ ನನ್ನ ಸಹಿ ಇದೆ. ಸಾಕ್ಷಿ ತೋರಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಅವರ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ತೋರಿಸಿದ ನಕಾಶೆಯನ್ನು ನಿಪಿ-2(ಸಿ) ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಗೆ ಪ್ರಕರಣವನ್ನು ಪಿ.ಐ., ಗೋವಿಂದರಾಜು ಅವರಿಗೆ ಹಸ್ತಾಂತರಿಸಿರುತ್ತೇನೆ.

ಆರೋಪಿತರು ತಲೆ ಮರೆಸಿಕೊಂಡಿರುತ್ತಾರೆ.
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)**

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಂ.ಎಂ**